ಅಧ್ಯಾಯ - 5

ಗ್ರಾಹಕ ಸಂರಕ್ಷಣಾ ಕಾಯ್ದೆ
(CONSUMER PROTECTION ACT)

5.1. ಪ್ರವೇಶಿಕೆ
5.2. ಗ್ರಾಹಕರ ಸಂರಕ್ಷಣಾ ಕಾನೂನು
5.3. ಕಾನೂನಿನ ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯಿಸುವಿಕೆ
5.4. ಉದ್ದೇಶ ಮತ್ತು ಕಾರಣಗಳು
5.5. ವಿವಿಧ ಪದಗಳ ವ್ಯಾಖ್ಯೆಗಳು
5.6. ಗ್ರಾಹಕರ ಸಂರಕ್ಷಣಾ ಮಂಡಳಿಗಳು
5.7. ಗ್ರಾಹಕರ ವಿವಾದಗಳ ಪರಿಹಾರ ನಿಯೋಗಗಳು
5.8. ಇತರ ಪರಿಚ್ಛೇದ/ ಸಂಕೀರ್ಣಗಳು
5.9. ಉಪಸಂಹಾರ

5.1. ಪ್ರವೇಶಿಕೆ (Introduction)

ನಮ್ಮ ದೇಶದಲ್ಲಿ ಈ ಕಾನೂನು ಜಾರಿಗೊಳ್ಳುವವರೆಗೆ ಉತ್ಪಾದಕರ, ವ್ಯಾಪಾರಿಗಳ ಮತ್ತು ವ್ಯವಹಾರಸ್ಥರ ಪ್ರಾಬಲ್ಯವೇ ಹೆಚ್ಚಾಗಿತ್ತು ಅದು ಸಾಮಾನ್ಯವಾಗಿತ್ತು, ಇಡೀ ಗ್ರಾಹಕ ವರ್ಗವೇ ನಿರ್ಲಕ್ಷಿತವಾಗಿತ್ತು, ಏಕೆಂದರೆ ಭಾರತದಲ್ಲಿ ಸಂಕುಚಿತ ಆರ್ಥಿಕತೆಯಿತ್ತು, ವ್ಯವಹಾರ ಗೌಪ್ಯತೆ ಕಾಪಾಡುವ ಸೋಗಿನಲ್ಲಿ ಉತ್ಪಾದಕರು ಸಾಕಷ್ಟು ಮಾಹಿತಿಯನ್ನು ಬಹಿರಂಗ ಪಡಿಸುತ್ತಿರಲಿಲ್ಲ. ಗ್ರಾಹಕರ ಅಹವಾಲುಗಳನ್ನು ಕೇಳುವವರೇ ಇರಲಿಲ್ಲ; ಅಥವಾ ಅತೀ ಕಡಿಮೆ ಅವಕಾಶಗಳು ಇದ್ದವು. ಆಹಾರ ಕಲಬೆರಕೆ ತಡೆಯ ಕಾನೂನು (Prevention of Food Adulteration Act), ಅವಶ್ಯಕ ಸರಕುಗಳ ಕಾಯ್ದೆ (Essential Commodities Act), ಔಷಧ ನಿಯಂತ್ರಣ ಕಾಯ್ದೆ (Drugs Control Act), ಅಳತೆ ಮತ್ತು ತೂಕಗಳ ಪ್ರಮಾಣದ ಕಾಯ್ದೆ (Standards of Weights and Measurements Act) ದೇಶದಲ್ಲಿ ಜಾರಿಯಲ್ಲಿ ಇದ್ದರೂ ಸಹ ಗ್ರಾಹಕರಲ್ಲಿ ಜಾಗೃತೆ ಬೆಳೆಸಲು ಸಮರ್ಪಕವೆನಿಸಿರಲಿಲ್ಲ, ಗ್ರಾಹಕರಿಗೆ ಪರಿಹಾರ ಒದಗಿಸಲು ಸಾಕಾಗಲಿಲ್ಲ. ಆದ್ದರಿಂದ, ಪ್ರಬಲ ವರ್ಗದವರಿಂದ ಶೋಷಣೆಗೆ ಒಳಗಾಗುವದರಿಂದ ರಕ್ಷಣೆ

Scanned with CamScanner

ನೀಡಲು ಇನ್ನೊಂದು ವಿಶೇಷ ಕಾನೂನಿನ ಅವಶ್ಯಕತೆಯನ್ನು ಮನಗಾಣಲಾಯಿತು. ಅದಕ್ಕಾಗಿಯೇ, ಅಪಾರ ಸಂಖ್ಯೆಯ ಗ್ರಾಹಕರಿಗೆ ನೆಮ್ಮದಿಯ ನೀಡಲು ಗ್ರಾಹಕ ರಕ್ಷಣಾ ಕಾಯ್ದೆ 1986 ವನ್ನು ಜಾರಿಗೊಳಿಸಲಾಯಿತು.

5.2. ಗ್ರಾಹಕರ ಸಂರಕ್ಷಣಾ ಕಾನೂನು (Consumers' Protection Act - COPRA)

ಗ್ರಾಹಕರ ರಕ್ಷಣಾ ಕಾನೂನು, 1986 ರಲ್ಲಿ ಜಾರಿಗೊಂಡಿತು. ಈ ಮೂಲ ಕಾಯ್ದೆಗೆ ಆಮೂಲಾಗ್ರವಾಗಿ ತಿದ್ದುಪಡೆಗಳನ್ನು ಮಾಡಿ, ಗ್ರಾರಕಾ (ಗ್ರಾಹಕರ ರಕ್ಷಣಾ ಕಾಯ್ದೆ) (ತಿದ್ದುಪಡೆಗಳು) ಕಾನೂನು 1993ವನ್ನು ಅಮಲಿನಲ್ಲಿ ತರಲಾಯಿತು. ಇವೆರಡು ಮಧ್ಯದ ಅವಧಿಯಲ್ಲಿ 1986 ಮತ್ತು 1993 ರ ಮಧ್ಯೆ, ಈ ಕಾಯ್ದೆಯನ್ನು 1987 ಮತ್ತು 1992 ರಲ್ಲಿಯೂ ತಿದ್ದುಪಡೆಗೊಳಿಸಲಾಗಿತ್ತು. ಇತ್ತೀಚಿನ ತಿದ್ದುಪಡೆಗಳನ್ನು 2002 ರಲ್ಲಿ ಜಾರಿಗೊಳಿಸಲಾಯಿತು. ಭಾರತಾದ್ಯಂತ 15.4.1987 ರಿಂದ ಜಾರಿಗೆ ಬಂದಿರುತ್ತದೆ.

ಆದರೆ, 1993 ರಲ್ಲಿನ ತಿದ್ದುಪಡೆಗಳು ಆಮೂಲಾಗ್ರ ಹಾಗೂ ಪೂರ್ಣವಾಗಿದ್ದು, ಅವುಗಳು 18.06.1993 ರಿಂದ ಆಚರಣೆಯಲ್ಲಿ ಬಂದವು. ಅದು ಈ ಕೆಳಗಿನವುಗಳನ್ನು ಲಭ್ಯಗೊಳಿಸಲು ಉದ್ದೇಶಿಸಲಾಗಿತ್ತು.

1. ಸಮಾನ ಆಸಕ್ತಿ ಹೊಂದಿದ ಗ್ರಾಹಕರು ಮತ್ತು ವ್ಯಪಾರಿಗಳು ಅನುಸರಿಸಿದ ಪರಿಬಂಧಕ ವ್ಯಾಪಾರೀ ಕ್ರಮ (Restrictive Trade Practice)ಗಳಿಗೆ ಸಂಬಂಧಿಸಿದ ಗ್ರಾಹಕರು ವರ್ಗ (ಗುಂಪು) ಕ್ರಮ ದೂರುಗಳನ್ನು ಸಲ್ಲಿಸಲು ಅವಕಾಶ ಮಾಡಿಕೊಡಲು ಕಾಯ್ದೆಯ ವ್ಯಾಪ್ತಿಯನ್ನು ವಿಸ್ತರಿಸುವದು.
2. ಸ್ವಯಂ–ಉದ್ಯೋಗದಲ್ಲಿ ತೊಡಗಿದ ಗ್ರಾಹಕರು ಕೇವಲ ತಮ್ಮ ಜೀವನಾವಶ್ಯಕಕ್ಕೆ ಖರೀದಿಸಿದ ಸರಕುಗಳಿಂದ ಯಾವುದೇ ದೋಷಗಳಿಂದ ತೊಂದರೆ ಅನುಭವಿಸಿದರೆ ಅವುಗಳ ಆಕ್ಷೇಪಣೆಗಳನ್ನು ನಿವಾರಣೆಯ ಸಂಸ್ಥೆಗಳಿಗೆ ಸಲ್ಲಿಸಲು ಅವಕಾಶ ಮಾಡಿಕೊಡುವದು.
3. ಗೃಹ ನಿರ್ಮಾಣ ಕಾರ್ಯಗಳಿಗೆ ''ಸೇವೆಗಳು'' ಶಬ್ದವನ್ನು ಸೇರಿಸುವದು.
4. ಸಮಾನ ಆಸಕ್ತಿ ಹೊಂದಿದ ಗ್ರಾಹಕರ ಗುಂಪಿನ ಪರವಾಗಿ ವರ್ಗ/ಗುಂಪು ದೂರನ್ನು ಸಲ್ಲಿಸಲು ಅವಕಾಶ ಮಾಡಿಕೊಡುವದು.
5. ವಿವಿಧ ತರಹದ ದೂರು ನಿವಾರಣೆ ಸಂಸ್ಥೆಗಳಲ್ಲಿ ನ್ಯಾಯ ಪೀಠವಲ್ಲದ ಸದಸ್ಯರನ್ನು ಆಯ್ಕೆ ಮಾಡಲು ಆಯ್ಕೆ ಸಮಿತಿ ರಚಿಸಲು ಅವಕಾಶ ಮಾಡುವದು.
6. ಜಿಲ್ಲಾ ವೇದಿಕೆ, ರಾಜ್ಯ ಆಯೋಗ ಮತ್ತು ರಾಷ್ಟ್ರೀಯ ಆಯೋಗಗಳ ಹಣಕಾಸಿನ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸುವುದು.
7. ದೂರು ನಿವಾರಣೆ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ಅಂದರೆ ಕಕ್ಷಿದಾರರ ವೆಚ್ಚಗಳಿಗೆ ಪರಿಹಾರ, ಸೇವೆಗಳಲ್ಲಿನ ದೋಷವನ್ನು ಅಥವಾ ಕೊರತೆಗಳನ್ನು ತೊಡೆದು ಹಾಕಲು ಆದೇಶಿಸುವ, ಸಾರ್ವಜನಿಕರ ರಕ್ಷಣೆಗೆ ಅಪಾಯವಾಗುವಂತಹ ಸರಕುಗಳನ್ನು

Scanned with CamScanner

ಹಿಂತೆಗೆದುಕೊಳ್ಳುವಂತೆ ಆದೇಶ ನೀಡುವ ಅಧಿಕಾರ ನೀಡುವ ಮುಂತಾದ ಅಧಿಕಾರಗಳನ್ನು ನೀಡುವದು.

8. ಕ್ಷುಲ್ಲಕ ಅಥವಾ ಕಿರಿಕಿರಿಯುಂಟುಮಾಡುವ ದೂರುಗಳನ್ನು ಸಲ್ಲಿಸಿದ ವ್ಯಕ್ತಿಗಳಿಗೆ ಶಿಕ್ಷೆಗೊಳಪಡಿಸುವದು.

9. ದೂರುಗಳನ್ನು ಸಲ್ಲಿಸಲಿಕ್ಕೆ ಒಂದು ವರ್ಷದ ಗರಿಷ್ಠ ಮಿತಿಯನ್ನು ನೀಡುವದು. (ಸದ್ಯ 2 ವರ್ಷದ ಮಿತಿ ಇದೆ.)

ಈ ಕಾಯ್ದೆಯನ್ನು 2002 ರಲ್ಲಿ ಮತ್ತೆ ತಿದ್ದುಪಡಿ ಮಾಡಲಾಯಿತು. ಅದಕ್ಕೆ ಮಾಡಿದ ತಿದ್ದುಪಡೆಗಳು ಮಹತ್ತರ ಮತ್ತು ವ್ಯಾಪಕ ಬದಲಾವಣೆಗಳನ್ನು ಹೊಂದಿದ್ದವು. ಗ್ರಾಹಕ ನ್ಯಾಯಾಲಯಗಳ ವ್ಯಾಪ್ತಿಯನ್ನು ಹೆಚ್ಚಿಸಿದವು. ಅವುಗಳನ್ನು ಸಾರಾಂಶ ರೂಪದಲ್ಲಿ ಹೀಗೆ ಹೇಳಬಹುದು.

1. ದೂರಿನ ಮೊತ್ತದ ಮಿತಿಗಳನ್ನು/ವ್ಯಾಪ್ತಿಯನ್ನು ಹೆಚ್ಚಿಸಿದ್ದು, ಅವು –

ತಿದ್ದುಪಡೆಗಿಂತ ಮುಂಚೆ	ತಿದ್ದುಪಡೆಯ ನಂತರ ಮಿತಿ
i) ಜಿಲ್ಲಾ ವೇದಿಕೆ – ರೂ. 5 ಲಕ್ಷಗಳಿಂದ →	ರೂ. 20 ಲಕ್ಷಕ್ಕಿಂತ ಕಡಿಮೆಯವರೆಗೆ
ii) ರಾಜ್ಯ ಆಯೋಗ – ರೂ. 5 ಲಕ್ಷದಿಂದ ರೂ. 20 ಲಕ್ಷ →	ರೂ. 20 ಲಕ್ಷದಿಂದ ರೂ. 1 ಕೋಟಿಯವರೆಗೆ.
iii) ರಾಷ್ಟ್ರೀಯ ಆಯೋಗ – ರೂ. 20 ಲಕ್ಷಕ್ಕಿಂತ ಹೆಚ್ಚು →	ರೂ. 1 ಕೋಟಿಗಿಂತ ಹೆಚ್ಚು.

2. ಎಲ್ಲ ಗ್ರಾಹಕ ನ್ಯಾಯಾಲಯಗಳ ಸದಸ್ಯರ ಅರ್ಹತೆಗಳಲ್ಲಿ ಪರಿಷ್ಕರಣೆ –
   i) ಸದಸ್ಯರು ಅಂಗಿಕೃತ ವಿಶ್ವವಿದ್ಯಾಲಯದ ಪದವಿಯನ್ನು ಹೊಂದಿರಬೇಕು.
   ii) ಸದಸ್ಯರು 35 ವಯಸ್ಸಿಗಿಂತ ಕಡಿಮೆ ಇರಬಾರದು.
   iii) ಸದಸ್ಯರು ಮರುನೇಮಕಕ್ಕೆ ಅರ್ಹರಾಗಿರುತ್ತಾರೆ.
   iv) ಶೇ. 50 ಮೀರದಷ್ಟು ಸದಸ್ಯರು ನ್ಯಾಯಾಂಗ ಹಿನ್ನೆಲೆ ಹೊಂದಿದ ವ್ಯಕ್ತಿಗಳು ಇರಬೇಕು.
3. ಕಾನೂನಿನ ಪರಿಚ್ಛೇದ 8A ರಡಿಯಲ್ಲಿ ಹೊಸ 'ಜಿಲ್ಲಾ ಗ್ರಾಹಕರ ರಕ್ಷಣಾ ಮಂಡಳಿ'ಗಳನ್ನು ರಚಿಸುವದು.
4. ರಾಜ್ಯ ಹಾಗೂ ರಾಷ್ಟ್ರೀಯ ಆಯೋಗದ ಸಂಚಾರಿ ಪೀಠಗಳು ರಾಜ್ಯದ ರಾಜಧಾನಿಗಳನ್ನು ಬಿಟ್ಟು ಹೊರ ಸ್ಥಳಗಳಲ್ಲಿ ಕಾರ್ಯಗೈಯ್ಯುವದಕ್ಕೆ ಅವಕಾಶ ನೀಡಲಾಗಿದೆ.
5. ನ್ಯಾಯಾಲಯಗಳು ಮಧ್ಯಂತರ ಆದೇಶಗಳನ್ನು ಜಾರಿಗೊಳಿಸಬಹುದು ಮತ್ತು ಅವುಗಳನ್ನು ಪರಿಷ್ಕರಣೆ ಮಾಡಬಹುದಾಗಿದೆ.

5.3. ಕಾನೂನಿನ ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯಿಸುವಿಕೆ
(Extent, Commencement and Applicability)

ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ, ಈ ಕಾನೂನು ಇಡೀ ಭಾರತ ದೇಶಕ್ಕೆ ಅನ್ವಯಿಸುತ್ತದೆ. ಅಧಿನಿಯಮಕ್ಕೆ ರಾಷ್ಟ್ರಪತಿಗಳು ದಿನಾಂಕ 24.12 1986 ರಂದು ಅಂಕಿತ ಹಾಕಿದರು. ಅದು ದಿನಾಂಕ 15.4.1987 ರಿಂದ ಜಾರಿಗೆ ಬಂದಿತು.

Scanned with CamScanner

ಕೇಂದ್ರ ಸರ್ಕಾರವು ಅಧಿಸೂಚನೆಯಿಂದ ತೊಡೆದು ಹಾಕಿದ ಸರಕು ಮತ್ತು ಸೇವೆಗಳನ್ನು ಹೊರತಪಡಿಸಿ, ಈ ಕಾನೂನು ಎಲ್ಲ ತರಹದ ಸರಕು ಮತ್ತು ಸೇವೆಗಳಿಗೆ ಅನ್ವಯಿಸುತ್ತದೆ.

ಈ ಕಾನೂನು ಎಲ್ಲ ಕ್ಷೇತ್ರಗಳನ್ನು ಅಂದರೆ ಖಾಸಗಿ, ಸಾರ್ವಜನಿಕ, ಸರ್ಕಾರಿ ಮತ್ತು ಸಹಕಾರಿ ರಂಗಗಳನ್ನು ಒಳಗೊಂಡಿರುತ್ತದೆ. ಇವಾವುದೇ ಕ್ಷೇತ್ರದಲ್ಲಿ ಉತ್ಪಾದನೆಯಾದ ಸರಕು ಅಥವಾ ನೀಡಿದ ಸೇವೆಗಳಲ್ಲಿ ಯಾವುದೇ ರೀತಿಯ ದೋಷಗಳು ಅಥವಾ ಕೊರತೆಗಳು ಇದ್ದರೆ ಅವುಗಳ ಕುರಿತು ಗ್ರಾಹಕನು ದೂರುಗಳನ್ನು ದಾಖಲಿಸಬಹುದು.

ಈ ಕಾನೂನಿನ ಪರಿಚ್ಛೇದಗಳು, ನಿಯಮಗಳು ಮತ್ತು ನಿಯಂತ್ರಣಗಳು ಪರಿಹಾರ ಸ್ವರೂಪದ್ದಾಗಿವೆ.

5.4. ಉದ್ದೇಶ ಮತ್ತು ಕಾರಣಗಳು (Objects and Reasons)

ಗ್ರಾಹಕರಿಗೆ ಉತ್ತಮ ರಕ್ಷಣೆ ನೀಡಬೇಕೆಂಬ ಉದ್ದೇಶದಿಂದ ಈ ಕಾನೂನನ್ನು ಜಾರಿಗೊಳಿಸಲಾಗಿದ್ದು, ನೊಂದ ಗ್ರಾಹಕರು ಯಾವ ಕ್ರಮ ಪಾಲಿಸಬೇಕೆಂಬ ದಾರಿ ತೋರಿಸುವ ಉದ್ದೇಶವನ್ನು ಹೊಂದಿದೆ. ಈ ಕೆಳಗಿನವುಗಳನ್ನು ರಕ್ಷಿಸುವ ಮತ್ತು ಉತ್ತೇಜಿಸುವದು ಕಾನೂನಿನ ಮುಂದಿರುವ ವಿವಿಧ ಉದ್ದೇಶಗಳಾಗಿವೆ.

1. ಜೀವಕ್ಕೆ ಮತ್ತು ಆಸ್ತಿಗಳಿಗೆ ಹಾನಿಕಾರಕವೆನಿಸುವ ಸರಕುಗಳನ್ನು ಮಾರಾಟಗೊಳಿಸುವದರ ವಿರುದ್ಧ ರಕ್ಷಿಸುವ ಹಕ್ಕುಗಳನ್ನು ಉತ್ತೇಜಿಸುವದು.
2. ಅನುಚಿತ ವ್ಯಾಪಾರಿ ಪದ್ಧತಿಗಳ ವಿರುದ್ಧ ಗ್ರಾಹಕರನ್ನು ರಕ್ಷಿಸುವದಕ್ಕಾಗಿ ಅವರು ಪರಿಮಾಣ, ಶುದ್ಧತೆ, ಪ್ರಮಾಣಕ, ಸಾಮರ್ಥ್ಯಗಳ ಬಗ್ಗೆ ಮಾಹಿತಿ ಪಡೆಯುವ ಹಕ್ಕು ಪ್ರೋತ್ಸಾಹಿಸುವುದು.
3. ವಿವಿಧ ಸರಕುಗಳನ್ನು ಸ್ಪರ್ಧಾತ್ಮಕ ಬೆಲೆಗಳಿಗೆ ಪಡೆಯುವಂತೆ ಭರವಸೆ ನೀಡುವ ಹಕ್ಕು ಪ್ರೋತ್ಸಾಹಿಸುವದು.
4. ಗ್ರಾಹಕರ ಆಸಕ್ತಿಯು ಸೂಕ್ತ ವೇದಿಕೆಯಲ್ಲಿ ಸಮಂಜಸ ಮಹತ್ವವನ್ನು ಪಡೆಯುವದರ ಭರವಸೆ ಹೊಂದುವ ಮತ್ತು ಆಲಿಸುವಂತಹ ಹಕ್ಕನ್ನು ಪ್ರೋತ್ಸಾಹಿಸುವದು.
5. ಅನುಚಿತ ವ್ಯಾಪಾರಿ ಆಚರಣೆಗಳ ಅಥವಾ ಶೋಷಣೆಗಳ ವಿರುದ್ಧ ಗ್ರಾಹಕರು ಪರಿಹಾರ ಕೇಳುವ ಹಕ್ಕು ಪ್ರೋತ್ಸಾಹಿಸುವದು ಮತ್ತು
6. ಗ್ರಾಹಕರಿಗೆ ಶಿಕ್ಷಣ ನೀಡುವ ಹಕ್ಕನ್ನು ಪ್ರೋತ್ಸಾಹಿಸುವದು.

ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಸ್ಥಾಪಿಸುವ ಗ್ರಾಹಕ ರಕ್ಷಣಾ ಮಂಡಳಿಗಳ ಮೂಲಕ ರಕ್ಷಿಸುವ ಮತ್ತು ಉತ್ತೇಜಿಸುವದರಿಂದ ಈ ಉದ್ದೇಶಗಳನ್ನು ಸಾಕಾರಗೊಳಿಸುವದು.

ಈ ಅಧಿನಿಯಮವು ಗ್ರಾಹಕರಿಗೆ ತೀವ್ರತರ ಮತ್ತು ಸುಲಭವಾಗಿ ಕಾನೂನು ದಾರಿಗಳು, ಶುಲ್ಕವಿಲ್ಲದೆ ನಿರ್ಣಯವನ್ನು 90 ದಿನಗಳಲ್ಲಿ ನೀಡುವದು, ವಕೀಲರನ್ನು ಲಭ್ಯಗೊಳಿಸುವದು ಮುಂತಾದವುಗಳ ಭರವಸೆ ನೀಡುತ್ತದೆ.

Scanned with CamScanner

5.5. ವಿವಿಧ ಪದಗಳ ವ್ಯಾಖ್ಯೆಗಳು (Definition of Various Terms)

ಈ ಕಾನೂನಿನಲ್ಲಿ ಬಳಸಿದ ವಿವಿಧ ಶಬ್ದಗಳ ಅರ್ಥವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಕೇವಲ ಅತ್ಯವಶ್ಯಕವಾದ ಶಬ್ದಗಳ ವ್ಯಾಖ್ಯೆಗಳನ್ನು ಮಾತ್ರ ಚರ್ಚಿಸಲಾಗಿದೆ.

1. ಗ್ರಾಹಕ (Consumer) ಪರಿಚ್ಛೇದ 2 (i) (d)

ಗ್ರಾಹಕನೊಬ್ಬ ವ್ಯಕ್ತಿಯಾಗಿದ್ದು, ಯಾರು –

a) ಪ್ರತಿಫಲಕ್ಕಾಗಿ ಸರಕುಗಳನ್ನು ಕೊಳ್ಳುತ್ತಾರೆಯೋ ಅವರು ಗ್ರಾಹಕನೆನಿಸುತ್ತಾನೆ. ಅಂತಹ ಪ್ರತಿಫಲವನ್ನು ಪಾವತಿಸಿರಬಹುದು ಅಥವಾ ಪಾವತಿಸುವ ವಚನ ನೀಡಿರಬಹುದು ಅಥವಾ ಭಾಗಶಃ ಪಾವತಿಸಿದ್ದು ಮತ್ತು ಭಾಗಶಃ ಪಾವತಿಸುವ ವಚನ ನೀಡಿದ್ದಾಗಿರಬಹುದು.

a) ಪ್ರತಿಫಲ ನೀಡಿ ಸೇವೆ ಎರವಲು ಪಡೆದಿದ್ದರೆ ಅವನು ಗ್ರಾಹಕನೆನಿಸುತ್ತಾನೆ. ಅಂತಹ ಪ್ರತಿಫಲವನ್ನು ಪಾವತಿಸಿರಬಹುದು ಅಥವಾ ಪಾವತಿಸುವ ವಚನ ನೀಡಿರಬಹುದು; ಅಥವಾ ಭಾಗಶಃ ಪಾವತಿಸಿದ್ದು ಇನ್ನೂ ಭಾಗಶಃ ಪಾವತಿಸುವ ವಚನ ನೀಡಿರಬಹುದು.

a) ಯಾವೊಬ್ಬನು ಪ್ರತಿಫಲ ನೀಡಿ ಖರೀದಿಸಿದ ಸರಕುಗಳನ್ನು ಅವನ ಅನುಮತಿಯೊಂದಿಗೆ ಆ ಸರಕುಗಳನ್ನು ಬಳಸುವವನು, ಗ್ರಾಹಕನಾಗುತ್ತಾನೆ.

a) ಸೇವೆಗಳನ್ನು ಪ್ರತಿಫಲ ನೀಡಿ ಬಾಡಿಗೆಗೆ ಪಡೆದ ವ್ಯಕ್ತಿಯೊಬ್ಬನ ಅನುಮತಿಯೊಂದಿಗೆ ಅಂತಹ ಸೇವೆಗಳ ಫಲಾನುಭವಿಯು ಗ್ರಾಹಕನಾಗುತ್ತಾನೆ.

ಈ ಮೇಲಿನ ವ್ಯಾಖ್ಯೆಯನ್ನು ವಿಶ್ಲೇಷಿಸಿದಾಗ, ಕೆಳಗೆ ಸೂಚಿಸಿದ ವ್ಯಕ್ತಿಗಳು ಅಥವಾ ಸಂಸ್ಥೆಗಳು 'ಗ್ರಾಹಕ' ಎನಿಸುವದಿಲ್ಲ.

i) ಯಾರು ಸರಕುಗಳನ್ನು ಮರುಮಾರಾಟಕ್ಕೆ ಅಥವಾ ವಾಣಿಜ್ಯದ ಉದ್ದೇಶಗಳಿಗೆ ಪಡೆದುಕೊಳ್ಳುವವನು.

ii) ಪ್ರತಿಫಲ ನೀಡದೆ ಸರಕು ಪಡೆದುಕೊಂಡವನು.

iii) ಪ್ರತಿಫಲ ನೀಡದೇ ಯಾವುದೇ ಸೇವೆಯನ್ನು ಪಡೆದುಕೊಂಡುವನು.

iv) ಪ್ರತಿಫಲ ನೀಡಿ ಖರೀದಿಸಿದ ವ್ಯಕ್ತಿಯ ಅನುಮತಿ ಇಲ್ಲದೆಯೇ ಸರಕುಗಳನ್ನು ಬಳಸಿದ ವ್ಯಕ್ತಿಯು.

v) ಪ್ರತಿಫಲ ನೀಡಿ ಸೇವೆಗಳನ್ನು ಪಡೆದುಕೊಂಡ ವ್ಯಕ್ತಿಯ ಅನುಮತಿ ಇಲ್ಲದೆ ಅಂತಹ ಸೇವೆಗಳ ಫಲ ಅನುಭವಿಸುವವವನು.

vi) ವೈಯಕ್ತಿಕ ಸೇವಾ ಒಪ್ಪಂದದ ಪ್ರಕಾರ ಸೇವೆಗಳನ್ನು ಪಡೆಯುವ ವ್ಯಕ್ತಿಯು ಗ್ರಾಹಕನಾಗುವದಿಲ್ಲ.

ಗ್ರಾಹಕನಾದವನು ಒಬ್ಬ ವ್ಯಕ್ತಿಯಾಗಿರಬಹುದು ಅಥವಾ ವ್ಯಕ್ತಿಗಳ ಗುಂಪು ಅಥವಾ ನೊಂದಾಯಿತ ಸಂಸ್ಥೆ ಅಥವಾ ನ್ಯಾಯಾಧೀಕರಣದ ವ್ಯಕ್ತಿಯಾಗಿರಬಹುದು. ಅಲ್ಲದೇ ಅವನು ವ್ಯಕ್ತಿಗಳ ನೊಂದಾಯಿತ ಅಥವಾ ನೊಂದಾಯಿಸಿದ ಸಮೂಹವಾದ ಸಂಸ್ಥೆಯಾಗಿರಬಹುದು.

Scanned with CamScanner

ಒಂದು ಸಮಸ್ಯೆಯು ಸಾರ್ವಜನಿಕ ಸ್ವರೂಪದ್ದಾಗಿದ್ದರೆ ಅದನ್ನು 'ಸಾರ್ವಜನಿಕ ಹಿತಾಸಕ್ತಿ ಅರ್ಜಿ'ಯೆಂದು ಯಾವುದೇ ಒಂದು ಸಂಸ್ಥೆಯು ದೂರು ಸಲ್ಲಿಸಬಹುದಾಗಿದೆ. ಸರ್ಕಾರ ಮತ್ತು ಸಹಕಾರಿ ಸಂಘದ ಸದಸ್ಯರನೊಬ್ಬನು ತನ್ನ ಸಂಘದ ವಿರುದ್ಧ ದೂರು ಸಲ್ಲಿಸಬಹುದಾಗಿದೆ. **(Dilip Bapat V/s Panchawati Coop. Housing Society (191) 1 PR** 27). ವಿದ್ಯಾರ್ಥಿಯೊಬ್ಬವನು ಶುಲ್ಕ ನೀಡಿ ಟ್ಯೂಶನ್ ಪಡೆಯುತ್ತಿದ್ದರೆ, ಅವನೂ ಸಹ ಗ್ರಾಹಕನೆಂದು ಪರಿಗಣಿಸಲ್ಪಡುತ್ತಾನೆ.

ಗ್ರಾಹಕರೆಂದು ಕರೆಯಿಸಿಕೊಳ್ಳುವ ಕೆಲವು ವ್ಯಕ್ತಿಗಳು

i) ಬ್ಯಾಂಕಿನ ಗ್ರಾಹಕರು

ii) ದೂರವಾಣಿ ಬಳಕೆದಾರರು

iii) ವಿದ್ಯುತ್‌ಚ್ಛಕ್ತಿ ಬಳಕೆದಾರರು

iv) ಸಾರ್ವಜನಿಕ ಸಾರಿಗೆಯಲ್ಲಿ ಪ್ರಯಾಣಿಸುವವರು

v) ಔಷಧೋಪಚಾರದ ರೋಗಿ.

vi) ಹಣ ಠೇವಣಿ ಇಡುವವನು

vii) ವಿಮಾ ಪಾಲಿಸಿಯ ನಾಮನಿರ್ದೇಶನ ವ್ಯಕ್ತಿ (ನಾಮಿನೀ)

viii) ಗೃಹ ನಿರ್ಮಾಣ ಸಂಘದಿಂದ ಖುಲ್ಲಾ ಜಾಗೆ ಪಡೆದವನು

ix) ಸೇವಾ ಫಲಾನುಭವಿ

ಗ್ರಾಹಕರೆಂದು ಕರೆಯಲಾರದ ಕೆಲವು ವ್ಯಕ್ತಿಗಳು

i) ಟ್ಯಾಕ್ಸಿಯನ್ನು ಖರೀದಿಸಿದವನು

ii) ಸರ್ಕಾರಿ ನೌಕರನು

iii) ಜಮೀನು ಬಾಡಿಗೆ ಪಡೆದವನು

iv) ಮರು ಮಾರಾಟಕ್ಕೆ ಶೇರು/ಸಾಲಪತ್ರ ಖರೀದಿಸಿದವನು

v) ವಾಣಿಜ್ಯ ಉದ್ದೇಶಕ್ಕೆ / ಮರುಮಾರಾಟಕ್ಕೆ ಖರೀದಿಸಿದ ಸರಕುಗಳು

vi) ವಕೀಲರ ಸೇವೆ ಪಡೆಯುವವನು

vii) ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆ ಪಡೆಯುವ ರೋಗಿ

viii) ಖಾಸಗಿ ಟ್ಯೂಶನ್ ಪಡೆಯುವ ವಿದ್ಯಾರ್ಥಿ

ix) ನೋಂದಾವಣೆಗೆ ದಾಖಲು ಪತ್ರಗಳನ್ನು ಸಲ್ಲಿಸುವ ವ್ಯಕ್ತಿ.

2. ಸರಕುಗಳು ಪರಿಚ್ಛೇದ 2 (1) (i)

ಸರಕುಗಳೆಂದರೆ ಸರಕುಗಳ ಮಾರಾಟ ಅಧಿನಿಯಮ 1930 ರಲ್ಲಿ ವ್ಯಾಖ್ಯೆಗೊಳಿಸಲಾಗಿರುವಂಥ ಸರಕುಗಳೆಂದು ಅರ್ಥ. ಆದ್ದರಿಂದ, ಹಣ ಮತ್ತು ಹಣ ಪಡೆಯುವ ಹಕ್ಕು ಪತ್ರಗಳನ್ನು ಹೊರತುಪಡಿಸಿ, ಪ್ರತಿಯೊಂದು ಪ್ರಕಾರದ ಚರ ಸ್ವತ್ತುಗಳು ಸರಕುಗಳಾಗಿವೆ. ಇವುಗಳಲ್ಲಿ ಸ್ಟಾಕು ಮತ್ತು ಶೇರುಗಳು, ಭೂಮಿಯ ಮೇಲೆ ಬೆಳೆದ ಫಸಲು, ಹುಲ್ಲು ಮತ್ತು ವಿಕ್ರಯ

ಒಪ್ಪಂದದ ಪ್ರಕಾರ ಅಥವಾ ವಿಕ್ರಯಕ್ಕೆ ಮೊದಲು ಭೂಮಿಯಿಂದ ಬೇರ್ಪಡಿಸ ಬಹುದಾದ ಭೂಮಿಯ ಭಾಗವಾಗಿರುವ ಅಥವಾ ಭೂಮಿಗೆ ಹೊಂದಿಕೊಂಡಿರುವ ಯಾವುದೇ ವಸ್ತುಗಳು ಸೇರಿರುತ್ತವೆ. (ಸರಕು ವಿಕ್ರಯ ಕಾನೂನು 1930, ಪರಿಚ್ಛೇದ 2 (7).

3. ಸೇವೆಗಳು ಪರಿಚ್ಛೇದ 2 (1) (o)

ಅಂದರೆ ಯಾವ ಸೇವೆಯು ವಾಣಿಜ್ಯ ಸ್ವರೂಪದ್ದಾಗಿದ್ದು, ಬೆಲೆ ಪಾವತಿಸಿದಾಗ ನೀಡುವದಾಗಿದೆ. ಜಮೀನು ಗುತ್ತಿಗೆ ಪಡೆದಾಗ ನೀರು ಪೂರೈಸಲು ಮಾಡಿಕೊಂಡ ಒಡಂಬಡಿಕೆಯು ವಾಣಿಜ್ಯದ ಸ್ವರೂಪ ಹೊಂದಿದಂತೆ ಕಾಣಲಾರದು.

''ಸೇವೆ'' ಅಂದರೆ ಸಂಭಾವ್ಯ ಬಳಕೆದಾರರಿಗೆ ದೊರಕುವಂತೆ ಮಾಡಲಾಗುವ ಯಾವುದೇ ಸ್ವರೂಪದ ಸೇವೆ ಎಂದು ಅರ್ಥ. ಅದು ಬ್ಯಾಂಕ ವ್ಯವಹಾರ (ಲೇವಾದೇವಿ), ಹಣಕಾಸು, ವಿಮೆ, ಸಾಗಣೆ, ಸಂಸ್ಕರಣ (Processing), ವಿದ್ಯುತ್ ಅಥವಾ ಇತರ ಶಕ್ತಿಯ ಪೂರೈಕೆ, ಊಟ, ಅಥವಾ ವಸತಿ ಅಥವಾ ಎರಡೂ, ಗೃಹ ನಿರ್ಮಾಣ, ಮನರಂಜನೆ, ವಿನೋದ ಅಥವಾ ಸಮಾಚಾರ ಅಥವಾ ಇತರ ಮಾಹಿತಿ ದೊರಕಿಸಿ ಕೊಡುವುದು ಇವುಗಳನ್ನು ಒಳಗೊಳ್ಳುತ್ತದೆ. ಆದರೆ ಅದು ಮುಫತ್ತಾಗಿ (ಉಚಿತವಾಗಿ) ಒದಗಿಸಿದ ಅಥವಾ ವೈಯಕ್ತಿಕ ಸೇವೆಯ ಕರಾರಿನ ಮೇರೆಗಿನ ಯಾವುದೇ ಸೇವೆಯನ್ನು ಒಳಗೊಳ್ಳುವುದಿಲ್ಲ.

ಉದಾಹರಣೆಗಾಗಿ **Consumer Unity and Trust Society v/s State of Rajasthan (1991) CPR 241 NC.** ಈ ಪ್ರಕರಣದಲ್ಲಿ ನಿರ್ಣಯಿಸಿದಂತೆ, ಸರ್ಕಾರಿ ಆಸ್ಪತ್ರೆಗಳಲ್ಲಿ ನೀಡುತ್ತಿರುವ ಔಷಧೋಪಚಾರವು ಸೇವೆಯೆಂದು ಪರಿಗಣಿಸಲಾಗದು.

ಉದಾಹರಣೆಗಾಗಿ – **Mappoyan v/s Premavathy Illango,** Lanseet **(1954) 2(88)** ಈ ಪ್ರಕರಣದಲ್ಲಿ ತೀರ್ಮಾನಿಸಿದಂತೆ, ಒಬ್ಬ ಖಾಸಗಿ ವೈದ್ಯರು ನೀಡುವ ಔಷಧೋಪಚಾರವು 'ಸೇವೆ'ಯೆಂದು ಅರ್ಥವಾಗುವದು.

ಉದಾಹರಣೆಗಾಗಿ – **HR Gill v/s Suryavanshi Kshatriya Dnyati Samaj (1992) (1) CPR 647.** ವಿವಾಹ ಕಾರ್ಯಗಳಿಗೆ ಮದುವೆ ಮಂಟಪಗಳನ್ನು ಬಾಡಿಗೆಗೆ ಪಡೆಯುವದು ಸಹ 'ಸೇವೆ'ಯೆಂದು ಪರಿಗಣಿಸಲಾಗುವದು.

4. ದೋಷಯುಕ್ತ ಸರಕುಗಳು (Defective Goods) **ಪರಿಚ್ಛೇದ 2** (1) (f)

ಈ ಕೆಳಗಿನ ಯಾವುದಾದರೊಂದು ದೋಷಗಳಿಂದಾದ ಸರಕುಗಳು ದೋಷ ಯುಕ್ತವೆನಿಸಿವೆ. i) ತಪ್ಪುಗಳು, ii) ಅಪೂರ್ಣತೆ, iii) ಕುಂದುಗಳು.

ನ್ಯೂನ್ಯತೆ ಎಂದರೆ ಸದ್ಯಜಾರಿಯಲ್ಲಿರುವ ಯಾವುದೇ ಕಾನೂನು ಮೂಲಕ ಅಥವಾ ಮೇರೆಗೆ ಅಥವಾ ಯವುದೇ ವ್ಯಕ್ತ ಅಥವಾ ಊಹ್ಯ ಕರಾರಿನ ಮೇರೆಗೆ ಅಥವಾ ಯಾವುದೇ ಸರಕುಗಳಿಗೆ ಸಂಬಂಧಿಸಿದಂತೆ ವ್ಯಾಪಾರಿಯು ಯಾವುದೇ ರೀತಿಯಲ್ಲಿ ಕ್ಲೇಮು ಮಾಡಿದಂತೆ ಇಟ್ಟುಕೊಂಡು ಬರಲು ಅಗತ್ಯಪಡಿಸಲಾಗಿರುವ ಗುಣ, ಪ್ರಮಾಣ, ಸತ್ವ (Pontency), ಶುದ್ಧತೆ ಅಥವಾ ಮಾನಕಗಳಲ್ಲಿನ ಯಾವುದೇ ದೋಷ ಅಪೂರ್ಣತೆ ಅಥವಾ ಕಳಪೆಗುಣ ಎಂದು ಅರ್ಥ.

Scanned with CamScanner

√5. ಸೇವೆಯಲ್ಲಿನ ಕೊರತೆ (Deficiency in Service) ಪರಿಚ್ಛೇದ 2 (1) (g)

"ಕೊರತೆ" ಅಂದರೆ ಸದ್ಯ ಜಾರಿಯಲ್ಲಿರುವ ಯಾವುದೇ ಕಾನೂನು ಮೂಲಕ ಅಥವಾ ಮೇರೆಗೆ ಇಟ್ಟುಕೊಂಡು ಬರಲು ಅಗತ್ಯಪಡಿಸಲಾದ ಅಥವಾ ಕರಾರಿನ ಮೇರೆಗೆ ಅಥವಾ ಅನ್ಯಥಾ ವ್ಯಕ್ತಿಯು ಪಾಲಿಸಲು ಜವಾಬ್ದಾರಿಯನ್ನು ವಹಿಸಿಕೊಂಡಿರುವ ಯಾವುದೇ ಸೇವೆಗೆ ಸಂಬಂಧಿಸಿದಂತೆ ಅದರ ಗುಣ, ಸ್ವರೂಪ ಮತ್ತು ಪಾಲಿಸಬೇಕಾದ ವಿಧಾನದಲ್ಲಿ ಇರುವ ಯಾವುದೇ ದೋಷ, ಅಪೂರ್ಣತೆ, ಕಳಪೆ ಗುಣ, ಸಾಕಷ್ಟಿಲ್ಲದಿರುವುದು ಎಂದು ಅರ್ಥ.

ಇದು ಎರಡು ವಿಧದ ಸೇವೆಗಳನ್ನು ಸೂಚಿಸುತ್ತದೆ. ಅದರಲ್ಲಿ ಕಾಯ್ದೆಯಡಿಯಲ್ಲಿ ಪ್ರಮಾಣಕಗಳನ್ನು ನೀಡಿದ ಸೇವೆಗಳು ಮತ್ತು ಕಕ್ಷಿದಾರರು ನಿರ್ಧರಿಸಿದ ಷರತ್ತು ಅಥವಾ ಭರವಸೆಗಳನ್ನು ಹೊಂದಿದ ಸೇವೆಗಳು. ಸೇವೆಯನ್ನು ನೀಡುವವನು ನಿರ್ಲಕ್ಷತನ ತೋರಿದರೆ ಅಥವಾ ಅದರಲ್ಲಿ ಕುಂದುಗಳಿದ್ದರೆ, ಅದನ್ನು ಕೊರತೆಗಳೆಂದು ಹೇಳಲಾಗುತ್ತದೆ.

ಸೇವೆಯಲ್ಲಿನ ಕೊರತೆಗಳಿಗೆ ಉದಾಹರಣೆಗಳು.

ಪ್ರಕರಣಗಳು (Cases)	ಕೊರತೆ (Deficiency)
i) L. C. Chandgotia v/s Northern Leasing and Industries Ltd. (1991) 2 CPJ 19 Raj.	ಗೃಹ ನಿರ್ಮಾಣ ಮಂಡಳಿಯು ವಾಗ್ದಾನ ನೀಡಿದ ಸೌಕರ್ಯಗಳನ್ನು ಪೂರೈಸದಿರುವುದು.
ii) Commissioner, officer Telecom v/s Bihar State Warehousing (1991) CPJ 42.	ದೂರವಾಣಿಯನ್ನು ಅಕ್ರಮವಾಗಿ ಸ್ಥಳಾಂತರಗೊಳಿಸುವದು, ಅದನ್ನು ಅಕ್ರಮವಾಗಿ ಕಡಿದು ಹಾಕುವದು, ಕಾರು ವ್ಯವಹಾರಸ್ಥನು ಒಪ್ಪಿದ ಸಮಯದೊಳಗೆ ಸ್ವಾಧೀನ ನೀಡದಿರುವದು, ನಿಗಧಿತ ಸಮಯಕ್ಕೆ ವಿಮಾನ ಹಾರಾಟ ಪ್ರಾರಂಭಿಸದಿರುವದು ಅಥವಾ ಸಮಯದಲ್ಲಿನ ಬದಲಾವಣೆ ಮುಂ.
iii) Premalata v/s National Insurance Co. (1991) CPJ 423 Raj.	ಸಾಕಷ್ಟು ಕಾರಣಗಳಿಲ್ಲದೆ ವಿಮಾ ಕಂಪನಿಯು ಹಕ್ಕಿನ ಹಣವನ್ನು ಪಾವತಿಸುವಲ್ಲಿ ತಪ್ಪುವದು.
iv) General Manager. Southern Railways, Madras v/s N. Prabhakaram (1992) I CPJ 323 NC.	ಪ್ರಥಮ ವರ್ಗದ ರೈಲು ಭೋಗಿಯಲ್ಲಿ ಮೆತ್ತನೆಯ ಆಸನಗಳನ್ನು ನೀಡದಿರುವದು.
v) Union of India v/s Aman Dahiya (1993) I CPJ 13 NC.	ದೂರವಾಣಿ ಸಂಪರ್ಕದಲ್ಲಿ ವಿಲಂಬ, ಸರಿಯಾಗಿ ಪರೀಕ್ಷಿಸದೆ ಅಧಿಕ ಬಿಲ್‌ಗಳನ್ನು ನೀಡುವದು.

Scanned with CamScanner

vi) Dr. K. I. Shivaih v/s Canara Bank (1992) I CPJ 41	ಠೇವಣಿ ಇಟ್ಟ ಹಣವನ್ನು ಗ್ರಾಹಕನ ಖಾತೆಗೆ ಜಮಾ ಮಾಡದೇ ಇರುವದು.
vii) Bank of India v/s Dr. Mukesh Kumar Shukla (1993) I CPJ 41.	ಪಾವತಿ ತಡೆ ನೀಡಿದ ಆದೇಶವನ್ನು ಪಾಲಿಸದೇ ಇರುವದು.
viii) Punjab National Bank v/s K. B. Shetty (1991) I 7 NC.	ಬ್ಯಾಂಕಿನ ಭದ್ರತಾ ಪೆಟ್ಟಿಗೆಯಲ್ಲಿ ಇಟ್ಟಂತಹ ವಸ್ತುಗಳನ್ನು ಬ್ಯಾಂಕು ರಕ್ಷಿಸದಿರುವದು.

6. ಅಪಾಯಕಾರಕ ಸರಕುಗಳು (Hazardous Goods)

ಜೀವಕ್ಕೆ ಅಪಾಯವೆನಿಸಿರುವ ಮತ್ತು ರಕ್ಷಣೆಗೆ ಧಕ್ಕೆಯಾಗಿರುವ ಸರಕುಗಳಿದ್ದಾಗ ವ್ಯಾಪಾರಸ್ಥರು ಅಂತಹ ಸರಕುಗಳ ಅಡಕ, ಬಳಸುವ ಪದ್ಧತಿ ಮತ್ತು ಅವುಗಳ ಬಳಕೆಯಿಂದಾಗುವ ಪರಿಣಾಮಗಳ ಬಗ್ಗೆ ಬಹಿರಂಗವಾಗಿ ಮಾಹಿತಿ ಪ್ರದರ್ಶಿಸಬೇಕು. ಅಂತಹ ಸೂಚನೆಗಳನ್ನು ಗ್ರಾಹಕರ ಗಮನಕ್ಕೆ ತರದೇ ಅಥವಾ ಎಚ್ಚರಿಕೆ ನೀಡದೇ ಮಾರಾಟಗೊಳಿಸಿದ್ದರೆ, ಅದು ದೂರು ನೀಡುವ ವಿಷಯವಾಗುತ್ತದೆ.

7. ಮೋಸದ ಸರಕು ಮತ್ತು ಸೇವೆಗಳು (Spurious Goods and Services) **ಪರಿಚ್ಛೇದ 2 (1) (oo)**

ಯಾವ ಸರಕುಗಳು ಮತ್ತು ಸರಕುಗಳು ನೈಜವಾದವುಗಳೆಂದು ಹೇಳಲಾಗಿತ್ತೋ ಅವುಗಳು ನಿಜವಾಗಿಯೂ ಹಾಗೆ ಇರದಿದ್ದಾಗ ಮೋಸದ ಸರಕು ಹಾಗೂ ಸೇವೆಗಳೆಂದು ಅರ್ಥೈಸಲಾಗುತ್ತದೆ.

8. ಪರಿಬಂಧಕ ವ್ಯಾಪಾರೀ ಕ್ರಮ (Restrictive Trade Practice) **ಪರಿಚ್ಛೇದ 2 (1) (nn)**

ಯಾವುದೇ ಸರಕನ್ನು ಕೊಳ್ಳಲು ಅಥವಾ ಸಂದರ್ಭಾನುಸಾರ ಸೇವೆಯನ್ನು ಬಾಡಿಗೆಗೆ ತೆಗೆದುಕೊಳ್ಳಲು ಅಥವಾ ಪಡೆದುಕೊಳ್ಳಲು ಇತರ ಯಾವುದೇ ಸರಕುಗಳನ್ನು ಕೊಂಡುಕೊಳ್ಳಲು ಅಥವಾ ಸೇವೆಯನ್ನು ಬಾಡಿಗೆಗೆ ತೆಗೆದುಕೊಳ್ಳಲು ಅಥವಾ ಪಡೆದುಕೊಳ್ಳಲು ಗ್ರಾಹಕರನನ್ನು ಅಗತ್ಯಪಡಿಸುವ ಯಾವುದೇ ವ್ಯಾಪಾರಿ ಕ್ರಮ ಎಂದು ಅರ್ಥ. ಯಾವುದೇ ಸರಕನ್ನು ಕೊಳ್ಳಬಯಸುವ ವ್ಯಕ್ತಿ ಅಥವಾ ಸೇವೆಯನ್ನು ಬಾಡಿಗೆಗೆ ತೆಗೆದುಕೊಳ್ಳ ಬಯಸುವ ವ್ಯಕ್ತಿ ಅದಕ್ಕಿಂತ ಪೂರ್ವದಲ್ಲಿ ಆತ ಬೇರೆ ಸರಕುಗಳನ್ನು ಕೊಳ್ಳಬೇಕು ಅಥವಾ ಸೇವೆಯನ್ನು ಪಡೆದುಕೊಳ್ಳಬೇಕು ಎಂದು ಅಗತ್ಯಪಡಿಸುವ ಕ್ರಮ ಪರಿಬಂಧಕ ವ್ಯಾಪಾರಿ ಕ್ರಮವಾಗುತ್ತದೆ. (Restrictive Trade Practice). ಹೊಸದಾಗಿ ಅಡಿಗೆ ಅನಿಲದ ಸಿಲಿಂಡರನ್ನು ಪಡೆದುಕೊಳ್ಳಬೇಕಾದರೆ ಆ ವ್ಯಾಪಾರಿ ಹೇಳಿದ ಒಲೆಯನ್ನು ಕೊಳ್ಳಲೇ ಬೇಕೆಂದು ಅಗತ್ಯ ಪಡಿಸುವುದು ಪರಿಬಂಧಕ ವ್ಯಾಪಾರೀ ಕ್ರಮವಾಗುತ್ತದೆ.

Scanned with CamScanner

ಸರಕುಗಳ ಪೂರೈಕೆಯನ್ನೇ ನಿಲ್ಲಿಸುವುದು, ಬೇರೆಯುವರು ವ್ಯಾಪಾರದಲ್ಲಿ ಭಾಗವಹಿಸದಂತೆ ಮಾಡುವುದಕ್ಕಾಗಿ ಸರಕುಗಳ ಬೆಲೆಯನ್ನು ಮೊದಲೇ ಇಳಿಸುವುದು, ಸರಕುಗಳನ್ನು ನಿರ್ದಿಷ್ಟ ಗ್ರಾಹಕರಿಗೆ ಅಥವಾ ಗ್ರಾಹಕರ ವರ್ಗಕ್ಕೆ ಮೊದಲು ಇನಕಾರ ಮಾಡುವುದು ಇತ್ಯಾದಿಗಳಂಥ ಹತ್ತು ಹಲವಾರು ಉದಾಹರಣೆಗಳನ್ನು ಕೊಡಬಹುದು.

ಗ್ರಾಹಕರ ಸಂರಕ್ಷಣಾ ಅಧಿನಿಯಮದಲ್ಲಿನ ವ್ಯಾಖ್ಯೆ ಇಷ್ಟು ವಿಶಾಲವಾದ ವ್ಯಾಪ್ತಿಯನ್ನು ಹೊಂದಿಲ್ಲ ಅನ್ನುವುದನ್ನು ಗಮನಿಸಬೇಕು. ಅದು ಹೆಚ್ಚಾಗಿ ತಳಕು ಹಾಕುವ (tie up sale)ಮಾರಾಟವನ್ನು ಪ್ರತಿಬಂಧಿಸುತ್ತದೆ ಅನ್ನಬೇಕು. ಅಂದರೆ ಒಂದು ಕಂಪನಿಯ 'ಕ' ಸರಕನ್ನು ಕೊಳ್ಳಬೇಕಾದರೆ 'ಖ' ಎಂಬ ಸರಕನ್ನು ಗ್ರಾಹಕರು ಕೊಳ್ಳಲೇಬೇಕು. ಆ ಸರಕು ಬೇರೆ ಕಂಪನಿಯದಿದ್ದು ಅದು ಪೇಟೆಯಲ್ಲಿ ಕಡಿಮೆ ಬೆಲೆಗೆ ಮತ್ತು ಸುಲಭವಾಗಿ ದೊರಕುತ್ತಿದ್ದಾಗ್ಯೂ 'ಕ' ಸರಕನ್ನು ಕೊಳ್ಳಬೇಕಾದರೆ 'ಖ' ಸರಕನ್ನು ಮಾರುವ ವ್ಯಾಪಾರಿ ಹೇಳಿದ 'ಖ' ಸರಕನ್ನು ಕೊಳ್ಳಲೇಬೇಕು ಅನ್ನುವುದು ತಳಕು ಹಾಕುವ ಮಾರಾಟ ಅನ್ನಬಹುದು. ಇಲ್ಲಿ 'ಖ' ಸರಕಿನ ಸ್ಪರ್ಧಾತ್ಮಕ ಉತ್ಪಾದನೆಗೆ ಹಿನ್ನಡೆ ಉಂಟು ಮಾಡಿದಂತಾಗುತ್ತದೆ. ಹೀಗಾಗಿ ಅದು ಪರಿಬಂಧಕ ವ್ಯಾಪಾರಿ ಕ್ರಮವಾಗುತ್ತದೆ. ಒಂದು ಕಂಪನಿಯು ಉತ್ಪಾದಿಸುವ ಒಂದು ಸರಕನ್ನು ಕೊಳ್ಳಬೇಕಾದರೆ ಆ ಕಂಪನಿ ಉತ್ಪಾದಿಸುವ ಇತರ ಸರಕುಗಳನ್ನು ಕೊಳ್ಳಲೇಬೇಕೆಂಬುದು ಇನ್ನೊಂದು ಸ್ವರೂಪದ ಪರಿಬಂಧಕ ವ್ಯಾಪರಿ ಕ್ರಮ. ಇದನ್ನು ಫುಲ್ ಲಾಯಿನ್‌ಫೋಸಿಂಗ (Full line forcing) ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ.

ಏಕಸ್ವಾಮ್ಯ ಮತ್ತು ಪರಿಬಂಧಕ ವ್ಯಾಪಾರಿ ಕ್ರಮ ಅಧಿನಿಯಮದ ವ್ಯಾಖ್ಯೆಯಂತೆ ಯಾವ ವ್ಯಾಪಾರೀ ಕ್ರಮವು ಯಾವುದೇ ರೀತಿಯಲ್ಲಿ ಮತ್ತು ಮುಖ್ಯವಾಗಿ ಉತ್ಪಾದನಾ ಪ್ರವಾಹದಲ್ಲಿನ ಬಂಡವಾಳ ಮತ್ತು ಸಂಪತ್ತಿನ ಮೂಲಗಳ (Resources) ಸುಗಮ ತೊಡಗಿಸುವಿಕೆಗೆ ಅಡ್ಡಿಯುಂಟು ಮಾಡುವ ಪ್ರವೃತ್ತಿಯನ್ನು ಹೊಂದುವಂಥ ಅಥವಾ ಸರಕುಗಳ ಅಥವಾ ಸೇವೆಗಳಿಗೆ ದರಗಳ ಕೃತಕತೆಗೆ ಸಂಬಂಧಿಸಿದಂತೆ ವಶಾವಣೆಯ ಷರತ್ತುಗಳಿಗೆ ಅಥವಾ ಗ್ರಾಹಕನ ಮೇಲೆ ಅನ್ಯಾಯದ ವೆಚ್ಚಗಳನ್ನು ಮತ್ತು ಪರಿಮಿತಿಗಳನ್ನು ಹಾಕುವ ರೀತಿಯಲ್ಲಿ ಪೇಟೆಯಲ್ಲಿ ಸರಕುಗಳ ಪೂರೈಕೆಗೆ ಸಂಬಂಧಿಸಿದಂತೆ, ಸ್ಪರ್ಧೆಯನ್ನುತಡೆಯುವ ಅಥವಾ ಹೇರುಪೇರು ಮಾಡುವ ಅಥವಾ ಪರಿಮಿತಗೊಳಿಸುವ ಪರಿಣಾಮ ಬೀರುವಂಥ ವ್ಯಾಪಾರಿ ಕ್ರಮ ಎಂದು ಹೇಳಲಾಗಿದೆ. ಹೀಗೆ ಎರಡೂ ವ್ಯಾಖ್ಯೆಗಳನ್ನು ಪರಿಶೀಲಿಸಿದಾಗ ಈ ಎಮ್‌ಆರ್‌ಟಿಪಿ ಅಧಿನಿಯಮದಲ್ಲಿನ ವ್ಯಾಖ್ಯೆ ಸ್ವಲ್ಪ ವಿಶಾಲಾರ್ಥವನ್ನು ಹೊಂದಿದ್ದು, ಹೆಚ್ಚು ಪರಿಣಾಮಕಾರಿ ಮತ್ತು ಪ್ರತಿಫಲ ನೀಡುವ ಉದ್ದೇಶ ಹೊಂದಿರುವುದು ಸ್ಪಷ್ಟವಾಗಿದೆ. ಉದಾ : ಬೆಲೆ ಗೊತ್ತುಪಡಿಸುವುದು, ಒಟ್ಟಾಗಿ ಬಾಯ್‌ಕಾಟ ಮಾಡುವುದು, ಬೇರೆಯವರನ್ನು ಹೊರತುಪಡಿಸಿ ವ್ಯವಹರಿಸುವುದು ಒಟ್ಟಾಗಿ ಟೆಂಡರ ಹಾಕುವುದು ಮತ್ತು ಬಿಡ್ ಮಾಡುವುದು, ಪ್ರಾದೇಶಿಕ ಪರಿಮಿತಿ ವಿಧಿಸುವುದು ಮರು ಮಾರಾಟದ ಬೆಲೆಗಳನ್ನು ಉಳಿಸಿಕೊಂಡು ಬರುವುದು, ಪರಸ್ಪರ ಹೊಂದಾಣಿಕೆಯಿಂದ ಮಾರಾಟ ಮಾಡುವುದು ಇತ್ಯಾದಿ ಇತ್ಯಾದಿ. ವ್ಯಾಪಾರಿಗಳು ಹಬ್ಬ ಹರಿದಿನಗಳಲ್ಲಿ ವಿಶೇಷ ಕಾರ್ಯಕ್ರಮಗಳಿರುವಾಗ ಇಂಥ ಕ್ರಮಗಳನ್ನು ಅನುಸರಿಸುತ್ತಿರುವುದು

Scanned with CamScanner

ಎಲ್ಲ ಗ್ರಾಹಕರ ಅನುಭವಕ್ಕೆ ಬಂದ ವಿಷಯ. ಉದಾ : ಸುಗ್ಗಿ ಕಾಲದಲ್ಲಿ ವ್ಯಾಪಾರಿಗಳು ಒಟ್ಟಾಗಿ ವ್ಯವಸಾಯ ಉತ್ಪನ್ನಗಳ ಬೆಲೆ ನಿಗದಿಪಡಿಸುವುದು.

9. ಅನುಚಿತ ವ್ಯಾಪಾರಿ ಕ್ರಮ (Unfair Trade Practice) ಪರಿಚ್ಛೇದ 2(1)(r)

ಯಾವುದೇ ಸರಕುಗಳ ಮಾರಾಟವನ್ನು, ಉಪಯೋಗವನ್ನು ಅಥವಾ ಪೂರೈಕೆಯನ್ನು ಅಭಿವೃದ್ಧಿಗೊಳಿಸುವ ಉದ್ದೇಶಕ್ಕಾಗಿ ಅಥವಾ ಯಾವುದೇ ಸೇವೆಯ ಅವಕಾಶಕ್ಕಾಗಿ ಯಾವುದೇ ಅನುಚಿತ ವಿಧಾನವನ್ನು ಅಥವಾ ಅನುಚಿತ ಅಥವಾ ವಂಚಕ ಆಚರಣೆಯನ್ನು ಅನುಸರಿಸುವ ವ್ಯಾಪಾರೀ ಕ್ರಮ ಎಂದು ಅರ್ಥ. ಇದು ಕೆಳಗೆ ಹೇಳಲಾಗಿರುವ ಕ್ರಮಗಳನ್ನು ಒಳಗೊಳ್ಳುತ್ತದೆ. ಅಂದರೆ–

1. ಮೌಖಿಕವಾಗಿ ಅಥವಾ ಬರಹದಲ್ಲಿ ಅಥವಾ ದೃಶ್ಯ ರೂಪಣದ ಮೂಲಕವಾಗಲಿ

i) ಸರಕುಗಳು ಒಂದು ನಿರ್ದಿಷ್ಟ ಮಾನಕ, ಗುಣ ಪರಿಮಾಣ, ತರಗತಿ, ಸಮ್ಮಿಶ್ರಣ, ರೀತಿ ಅಥವಾ ಮಾದರಿಯವುಗಳು ಇರುತ್ತವೆಂದು ಸುಳ್ಳು ನಿರೂಪಣೆ ಮಾಡುವುದು.

ii) ಸೇವೆಗಳು ಒಂದು ನಿರ್ದಿಷ್ಟ ಮಟ್ಟದ, ಗುಣದ ಅಥವಾ ರೀತಿಯದು ಇರುತ್ತವೆಂದು ಸುಳ್ಳು ನಿರೂಪಣೆ ಮಾಡುವುದು.

iii) ಯಾವುದೇ ಪುನಃ ನಿರ್ಮಿತ, ಇನ್ನೊಬ್ಬನು ಉಪಯೋಗಿಸಿದ, ಜೀರ್ಣೋದ್ಧಾರ ಮಾಡಿದ, ಪುನಃ ಜೋಡಿಸಿದ ಅಥವಾ ಹಳೆಯ ಸರಕುಗಳನ್ನು ಹೊಸ ಸರಕುಗಳೆಂದು ನಿರೂಪಣೆ ಮಾಡುವುದು.

iv) ಸರಕುಗಳು ಅಥವಾ ಸೇವೆಗಳು ಅವು ಹೊಂದದೆ ಇರುವ ಪ್ರಾಯೋಜಿಕತೆ ಅನುಮೋದನೆ ನೆರವೇರಿಕೆ, ಲಕ್ಷಣಗಳು, ಉಪ ಸಾಧನಗಳು, ಉಪಯೋಗಗಳು ಅಥವಾ ಪ್ರಯೋಜನಗಳನ್ನು ಹೊಂದಿರುತ್ತವೆಯೆಂದು ನಿರೂಪಣೆ ಮಾಡುವುದು.

v) ಮಾರಾಟಗಾರನು ಅಥವಾ ಪೂರೈಕೆದಾರನು ಅವರು ಹೊಂದದೆ ಇರುವ ಪ್ರಾಯೋಜಿಕತೆಯನ್ನು ಅಥವಾ ಅನುಮೋದನೆಯನ್ನು ಅಥವಾ ಸ್ವೀಕೃತಿಯನ್ನು ಹೊಂದಿರುವುದಾಗಿ ನಿರೂಪಣೆ ಮಾಡುವುದು.

vi) ಯಾವುದೇ ಸರಕುಗಳ ಅಥವಾ ಸೇವೆಗಳ ಅವಶ್ಯಕತೆಗೆ ಅಥವಾ ಉಪಯುಕ್ತತೆಗೆ ಸಂಬಂಧಿಸಿದಂತೆ ಸುಳ್ಳು ಅಥವಾ ತಪ್ಪುದಾರಿಗೆ ಎಳೆಯುವ ನಿರೂಪಣೆ ಮಾಡುವುದು.

vii) ಒಂದು ಉತ್ಪಾದನೆಯ ಅಥವಾ ಯಾವುದೇ ಸರಕುಗಳ ಕಾರ್ಯಕ್ಷಮತೆಯ, ಪರಿಣಾಮಕಾರಿತ್ವದ ಅಥವಾ ತಾಳಿಕೆಯ ಬಗ್ಗೆ ಸಾಕಷ್ಟು ಆಧಾರವಿಲ್ಲದೆಯೇ ಮತ್ತು ಸಮುಚಿತ ಪರೀಕ್ಷೆಗೊಳಪಡಿಸದೆ ಸಾರ್ವಜನಿಕರಿಗೆ ಭರವಸೆಯನ್ನು ಅಥವಾ ಖಾತರಿಯನ್ನು ಕೊಡುವುದು.

ಅಂಥ ಭರವಸೆ ಅಥವಾ ಖಾತರಿಯು ಸಾಕಷ್ಟು ಅಥವಾ ಸಮುಚಿತ ಪರೀಕ್ಷೆಯನ್ನು ಆಧರಿಸಿದೆಯೆಂದು ರಕ್ಷಣೆಯ ಪ್ರತಿವಾದವನ್ನು ಮಂಡಿಸಿದಾಗ, ಅಂಥ ಪ್ರತಿ ವಾದವನ್ನು ರುಜುವಾತು ಪಡಿಸುವ ಹೊಣೆಯು ಅದನ್ನು ಮಂಡಿಸಿದ ವ್ಯಕ್ತಿಯ ಮೇಲೆಯೇ ಇರುತ್ತದೆ.

Scanned with CamScanner

viii) ಸಾರ್ವಜನಿಕವಾಗಿ

i) ಯಾವುದೇ ಸರಕುಗಳ ಉತ್ಪಾದನೆಯ ಅಥವಾ ಸೇವೆಗಳ ಭರವಸೆ ಅಥವಾ ಖಾತರಿ; ಅಥವಾ

ii) ಒಂದು ವಸ್ತುವನ್ನು ಅಥವಾ ಅದರ ಭಾಗವನ್ನು ಬದಲಾಯಿಸಿಕೊಡಲು, ಸುಸ್ಥಿತಿಯಲ್ಲಿಟ್ಟುಕೊಂಡು ಬರಲು ಅಥವಾ ದುರಸ್ತಿ ಮಾಡಲು ಅಥವಾ ಸೇವೆಯು ಒಂದು ಗೊತ್ತುಪಡಿಸಿದ ಪರಿಣಾಮವನ್ನು ತಲುಪುವವರೆಗೆ ಅದನ್ನು ಪುನಾರಾವರ್ತಿಸಲು ಅಥವಾ ಮುಂದುವರೆಸಲು ಕೊಟ್ಟ ವಾಗ್ದಾನ ಹಾಗೆ ತಾತ್ಪರ್ಯವಾಗುವ ಭರವಸೆ ಅಥವಾ ಖಾತರಿ ಅಥವಾ ವಾಗ್ದಾನವು ಗಣನೀಯವಾಗಿ ತಪ್ಪು ದಾರಿಗೆಳೆಯುವಂಥದಾಗಿದ್ದರೆ ಅಥವಾ ಅಂಥ ಭರವಸೆಯನ್ನು ಅಥವಾ ಖಾತರಿಯನ್ನು ಅಥವಾ ವಾಗ್ದಾನವನ್ನು ಪಾಲಿಸಲಾಗುವುದೆಂಬ ಬಗ್ಗೆ ಯುಕ್ತ ಸಂಭಾವ್ಯಗೆ ಇಲ್ಲದಿದ್ದರೂ ಹಾಗೆ ನಿರೂಪಣೆ ಮಾಡುವುದು.

xi) ಒಂದು ಉತ್ಪಾದಿತ ವಸ್ತು ಅಥವಾ ಅದೇ ರೀತಿಯ ಉತ್ಪಾದನೆಗಳು ಅಥವಾ ಸರಕುಗಳು ಅಥವಾ ಸೇವೆಗಳು ಸಾಮಾನ್ಯವಾಗಿ ಮಾರಾಟವಾದ ಅಥವಾ ಮಾರಾಟವಾಗುತ್ತಿರುವ ಅಥವಾ ಒದಗಿಸಲ್ಪಡುತ್ತಿರುವ ದರಗಳಿಗೆ ಸಮಬಂಧಿಸಿದಂತೆ ಸಾರ್ವಜನಿಕರನ್ನು ಗಣನೀಯವಾಗಿ ತಪ್ಪುದಾರಿಗೆಳೆಯುವ ಮತ್ತು ಈ ಉದ್ದೇಶಕ್ಕಾಗಿ ದರಕ್ಕೆ ಸಂಬಂಧಿಸಿದಂತೆ ನಿರೂಪಣೆಯ ಉತ್ಪಾದನೆಗಳು ಅಥವಾ ಸರಕುಗಳು ಅಥವಾ ಸೇವೆಗಳು ಸಾಮಾನ್ಯವಾಗಿ ಸಂಬಂಧಿಸಿದ ಪೇಟೆಯಲ್ಲಿ ಮಾರಾಟಗಾರರಿಂದ ಮಾರಾಟವಾದ ಅಥವಾ ಪೂರೈಕೆದಾರರು ಒದಗಿಸಿದ ದರಗಳಿಗೆ, ಆದರೆ ಯಾವ ವ್ಯಕ್ತಿಯಿಂದ ಅಥವಾ ಯಾವ ವ್ಯಕ್ತಿಯ ಪರವಾಗಿ ನಿರೂಪಣೆಯನ್ನು ಮಾಡಲಾಗಿದೆಯೋ ಆ ವ್ಯಕ್ತಿಯು ಒದಗಿಸಿದ ದರದಲ್ಲಿಯೇ ಉತ್ಪಾದನೆಯನ್ನು ಮಾಡಲಾಗಿದೆ ಅಥವಾ ಸೇವೆಯನ್ನು ಒದಗಿಸಲಾಗಿದೆ ಎಂದು ಸ್ಪಷ್ಟವಾಗಿ ಹೇಳಿದ ಹೊರತು, ಅನ್ವಯಿಸುತ್ತವೆಯೆಂದು ಪೂರ್ವ ಭಾವನೆ ಮಾಡತಕ್ಕುದು.

x) ಬೇರೊಬ್ಬನ ಸರಕುಗಳನ್ನು ಅಥವಾ ಸೇವೆಗಳನ್ನು ಅಥವಾ ವ್ಯಾಪಾರವನ್ನು ಹೀನಾಯಿಸುವ (Disparaging) ಮತ್ತು ತಪ್ಪುದಾರಿಗೆಳೆಯುವ ಸುಳ್ಳು ಸಂಗತಿಗಳನ್ನು ಹೇಳುವದು.

2. ಯಾವುದೇ ವೃತ್ತ ಪತ್ರಿಕೆಯಲ್ಲಿ ಅಥವಾ ಅನ್ಯಥಾ ಯಾವುದೇ ಸರಕುಗಳನ್ನು ಅಥವಾ ಸೇವೆಗಳನ್ನು ಅವುಗಳ ಚೌಕಾಸೀ ದರದಲ್ಲಿ ಮಾರುವ ಅಥವಾ ಪೂರೈಸುವ ಉದ್ದೇಶವಿಲ್ಲದೆಯೇ ಅಂಥ ಚೌಕಾಸೀ ದರದಲ್ಲಿ ಅಥವಾ ಯಾವ ಪೇಟೆಯಲ್ಲಿ ವ್ಯವಹಾರವನ್ನು ನಡೆಸಲಾಗುತ್ತಿದೆಯೋ ಆ ಪೇಟೆಯ ಸ್ವರೂಪವನ್ನು ಮತ್ತು ವ್ಯವಹಾರದ ಸ್ವರೂಪ ಮತ್ತು ಗಾತ್ರವನ್ನು ಮತ್ತು ಜಾಹೀರಾತಿನ ಸ್ವರೂಪವನ್ನು ಗಮನಿಸಿ ಯುಕ್ತ ಅವಧಿಯಲ್ಲಿ ಮತ್ತು ಪ್ರಮಾಣದಲ್ಲಿ ಅಂಥ ಸರಕುಗಳ ಅಥವಾ ಸೇವೆಗಳ ಮಾರಾಟ ಅಥವಾ ಪೂರೈಕೆಯ ಬಗ್ಗೆ ಪ್ರಕಟಣೆಗೆ ಅನುಮತಿಸುವುದು.

Scanned with CamScanner

3. (ಎ) ಬಹುಮಾನಗಳನ್ನು ಪಾರಿತೋಷಕಗಳನ್ನು ಅಥವಾ ಇತರ ವಸ್ತುಗಳನ್ನು ಕೊಡುತ್ತೇವೆಂದು ಹೇಳಿದ ರೀತಿಯಲ್ಲಿ ಒದಗಿಸುವ ಇಚ್ಛೆ ಇಲ್ಲದೆಯೇ ಅವುಗಳನ್ನು ಕೊಡಮಾಡುವುದು ಅಥವಾ ಇಡಿಯ ವ್ಯವಹಾರದಲ್ಲಿ ವಿಧಿಸಲಾದ ಮೊತ್ತದ ಮೂಲಕ ಪೂರ್ಣವಾಗಿ ಅಥವಾ ಭಾಗಶಃ ವಸೂಲು ಮಾಡಿಕೊಂಡಿರುವಲ್ಲಿ ಏನನ್ನೋ ಮುಫತ್ತಾಗಿ ಕೊಡಲಾಗಿದೆ ಅಥವಾ ಕೊಡಮಾಡಲಾಗಿದೆ ಎಂಬ ಪರಿಣಾಮವನ್ನುಂಟು ಮಾಡುವುದಕ್ಕೆ;

(ಬಿ) ಯಾವುದೇ ಉತ್ಪನ್ನದ ಅಥವಾ ಯಾವುದೇ ವ್ಯವಹಾರದ ಹಿತಾಸಕ್ತಿಯ ಮಾರಾಟ, ಉಪಯೋಗ ಅಥವಾ ಪೂರೈಕೆಯನ್ನು ವೃದ್ಧಿಗೊಳಿಸುವ ಉದ್ದೇಶಕ್ಕಾಗಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಸ್ಪರ್ಧೆಯನ್ನು, ಲಾಟರಿಯನ್ನು ಜೂಜಾಟವನ್ನು ಅಥವಾ ಕೌಶಲ್ಯದ ಆಟವನ್ನು ನಡೆಯಿಸುವುದಕ್ಕೆ ಅನುಮತಿಸುವುದು.

4. ಗ್ರಾಹಕರು ಉಪಯೋಗಕ್ಕೆಂದು ಉದ್ದೇಶಿಸಿ ಅಥವಾ ಉಪಯೋಗಿಸುವ ಸಂಭವವಿರುವ ತರದ ಸರಕುಗಳ ಮಾರಾಟವನ್ನು ಅಥವಾ ಪೂರೈಕೆಯನ್ನು ಸದರೀ ಸರಕುಗಳನ್ನು ಉಪಯೋಗಿಸುವ ವ್ಯಕ್ತಿಗೆ ಕ್ಷತಿ ಉಂಟಾಗುವ ಅಪಾಯವನ್ನು ತಪ್ಪಿಸಲು ಅಥವಾ ಕಡಿಮೆ ಮಾಡಲು ಅವಶ್ಯವಾಗಿರುವಂತೆ ಸದರೀ ಸರಕುಗಳ ಪರಿಣಾಮ, ಸಮ್ಮಿಶ್ರಣ ಒಳಾಂಶಗಳು, ವಿನ್ಯಾಸ, ರಚನೆ, ಸಂಸ್ಕರಣ ಅಥವಾ ಪ್ಯಾಕಿಂಗಗಳಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರವು ಗೊತ್ತುಪಡಿಸಿದ ಗುಣಮಟ್ಟಗಳನ್ನು ಈಡೇರಿಸುವುದಿಲ್ಲ ಎಂಬುದನ್ನು ತಿಳಿದು ತಿಳಿದೂ ಅಥವಾ ಹಾಗೆ ನಂಬಲು ಕಾರಣಗಳಿರುವಾಗ್ಯೂ ಅವುಗಳ ಮಾರಾಟಕ್ಕೆ ಅಥವಾ ಪೂರೈಕೆಗೆ ಅನುಮತಿಸುವುದು.

5. ಸರಕುಗಳ ದಾಸ್ತಾನು ಮಾಡಲು ಅಥವಾ ನಾಶಪಡಿಸಲು ಅನುಮತಿಸುವುದು, ಸರಕುಗಳನ್ನು ಮಾರಲು ಅಥವಾ ಮಾರಾಟ ಮಾಡಲು ಲಭ್ಯವಾಗುವಂತೆ ಮಾಡಲು, ಯಾವುದೇ ಸೇವೆಯನ್ನು ಒದಗಿಸಲು ಇನಕಾರ ಮಾಡುವುದು, ಅಂಥ ದಾಸ್ತಾನು ಮಾಡುವುದು ಅಥವಾ ನಾಶಪಡಿಸುವುದು ಅಥವಾ ಇನಕಾರವು, ಆ ಸರಕುಗಳ ಅಥವಾ ಅಂಥ ಇತರ ಸರಕುಗಳ ಅಥವಾ ಸೇವೆಗಳ ಬೆಲೆಗಳನ್ನು ಏರಿಸಲು ಅಥವಾ ಏರಿಸುವತ್ತ ವಾಲುತ್ತಿದ್ದಾರೆ ಅಥವಾ ಏರಿಸಲು ಉದ್ದೇಶಿಸಿದ್ದಾರೆ, ಇವು ಹೇಳಿಕೆಗಳು.

10. ಗ್ರಾಹಕರ ವ್ಯಾಜ್ಯಗಳು (Consumer Disputes) ಪರಿಚ್ಛೇದ (1) (e)

ಒಬ್ಬ ವ್ಯಕ್ತಿಯ ವಿರುದ್ಧ ಇನ್ನೊಬ್ಬನು ಗ್ರಾಹಕರ ವಿವಾದಗಳ ಪರಿಹಾರ ವೇದಿಕೆಗಳಿಗೆ ದೂರನ್ನು ಸಲ್ಲಿಸಿದಾಗ, ಅಂತಹ ವ್ಯಕ್ತಿಯು ದೂರುಗಳನ್ನು ತಳ್ಳಿಹಾಕಿದಾಗ ಅಥವಾ ವಿವಾದ ಮಾಡಿದಾಗ ಗ್ರಾಹಕರ ವ್ಯಾಜ್ಯ ಉದ್ಭವಿಸುತ್ತದೆ. ಪ್ರತಿಯೊಂದು ಆಕ್ಷೇಪಣೆಗಳು ಪ್ರತ್ಯೇಕ ವ್ಯಾಜ್ಯ ಅಥವಾ ವಿವಾದವೆಂದು ತಿಳಿದು ಪ್ರತಿಯೊಂದಕ್ಕು ಪರಿಹಾರಗಳನ್ನು ಆಪೇಕ್ಷಿಸುತ್ತದೆಯೆಂದು ತಿಳಿಯಬೇಕು.

ಫಿರ್ಯಾದುದಾರ (Complainant) ಅಂದರೆ

i) ಗ್ರಾಹಕ ; ಅಥವಾ

Scanned with CamScanner

ii) 1956ರ (1956 ರ 1) ಕಂಪನಿ ಅಧಿನಿಯಮದ ಅಥವಾ ಸಧ್ಯ ಜಾರಿಯಲ್ಲಿರುವ ಇತರ ಯಾವುದೇ ಕಾನೂನು ಮೇರೆಗೆ ನೋಂದಾಯಿತವಾದ ಸ್ವಯಂಸೇವಾ ಗ್ರಾಹಕರಸಂಘ; ಅಥವಾ

iii) ಫಿರ್ಯಾದನ್ನು ಸಲ್ಲಿಸುವ ಕೇಂದ್ರ ಸರಕಾರ ಅಥವಾ ಯಾವುದೇ ರಾಜ್ಯ ಸರಕಾರ; ಅಥವಾ

iv) ಒಂದೇ ಹಿತಾಸಕ್ತಿ ಇರುವ ಅನೇಕ ಗ್ರಾಹಕರಿರುವಲ್ಲಿ ಒಬ್ಬ ಅಥವಾ ಹೆಚ್ಚಿನ ಸಂಖ್ಯೆಯ ಗ್ರಾಹಕರು ಎಂದು ಅರ್ಥ.

ಫಿರ್ಯಾದು (Complaint) ಅಂದರೆ

i) ಯಾವನೇ ವ್ಯಾಪಾರಿಯು ಅನುಚಿತ ವ್ಯಾಪಾರ ಕ್ರಮವನ್ನು ಅಥವಾ ಪರಿಬಂಧಕ ವ್ಯಾಪಾರದ ಕ್ರಮವನ್ನು ಅನುಸರಿಸುತ್ತಿರುತ್ತಾನೆ.

ii) ತಾನು ಕೊಂಡುಕೊಂಡ ಅಥವಾ ಕೊಂಡುಕೊಳ್ಳಲು ಒಪ್ಪಿರುವ ಸರಕುಗಳಲ್ಲಿ ಒಂದು ಅಥವಾ ಹಲವಾರು ನ್ಯೂನ್ಯತೆಗಳಿವೆ.

iii) ತಾನು ಬಾಡಿಗೆಗೆ ತೆಗೆದುಕೊಂಡ ಅಥವಾ ಪಡೆದುಕೊಂಡ ಅಥವಾ ಬಾಡಿಗೆಗೆ ತೆಗೆದುಕೊಳ್ಳಲು ಅಥವಾ ಪಡೆದುಕೊಳ್ಳಲು ಒಪ್ಪಿದ ಸೇವೆಯಲ್ಲಿ ಯಾವುದೇ ರೀತಿಯಲ್ಲೂ ನ್ಯೂನ್ಯತೆ ಇದೆ.

iv) ಸಧ್ಯಜಾರಿಯಲ್ಲಿರುವ ಕಾನೂನು ಮೂಲಕ ಅಥವಾ ಮೇರೆಗೆ ನಿರ್ದಿಷ್ಟ ಪಡಿಸಿದ ಬೆಲೆಗಿಂತ ಅಥವಾ ಆಯಾ ಸರಕಿನ ಮೇಲೆ ಅಥವಾ ಸರಕನ್ನು ಒಳಗೊಂಡಿರುವ ಪ್ಯಾಕೇಜಿನ ಮೇಲೆ ತೋರಿಸಲಾಗಿರುವ ಬೆಲೆಗಿಂತ ಹೆಚ್ಚಿನ ಬೆಲೆಯನ್ನು ಆ ಸರಕುಗಳಿಗೆ ವ್ಯಾಪಾರಿಯು ವಸೂಲು ಮಾಡಿದ್ದಾನೆ;

v) ಉಪಯೋಗಿಸಿದಾಗ ಪ್ರಾಣಕ್ಕೆ ಮತ್ತು ಸುರಕ್ಷಿತತೆಗೆ ಅಪಾಯಕಾರಿಯಾಗುವಂಥ ಸರಕುಗಳನ್ನು ಅಂಥ ಸರಕುಗಳ ಒಳಾಂಶಗಳಿಗೆ, ಅವುಗಳ ಉಪಯೋಗದ ವಿಧಾನ ಮತ್ತು ಪರಿಣಾಮಗಳಿಗೆ ಸಂಬಂಧಿಸಿದ ಮಾಹಿತಿ ಪ್ರದರ್ಶಿಸುವುದನ್ನು ಅಗತ್ಯಪಡಿಸುವ ಸಧ್ಯ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳನ್ನು ಉಲ್ಲಂಘಿಸಿ ಸಾರ್ವಜನಿಕರಿಗೆ ಮಾರಾಟ ಮಾಡಲು ಕೊಡ ಮಾಡುತ್ತಿದ್ದಾನೆಂದು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಒದಗಿಸಲಾಗಿರುವ ಯಾವುದೇ ಪರಿಹಾರವನ್ನು ಪಡೆದುಕೊಳ್ಳುವ ಉದ್ದೇಶದಿಂದ ಫಿರ್ಯಾದುದಾರನು ಬರಹದಲ್ಲಿ ಮಾಡಿದ ಯಾವುದೇ ಅಪಾದನೆ ಎಂದು ಅರ್ಥ.

11. ವ್ಯಾಪಾರಿ (Trader) ಪರಿಚ್ಛೇದ 2 (1) (q)

ಯಾವುದೇ ಸರಕುಗಳಿಗೆ ಸಂಬಂಧಿಸಿದಂತೆ ''ವ್ಯಾಪಾರಿ'' ಅಂದರೆ ಯಾವುದೇ ಸರಕುಗಳನ್ನು ಮಾರಾಟ ಮಾಡಲು ಹಂಚುವ ಅಥವಾ ಮಾರುವ ವ್ಯಕ್ತಿ ಎಂದು ಅರ್ಥ ಮತ್ತು ಅವುಗಳ ತಯಾರಕನನ್ನು ಮತ್ತು ಅಂಥ ಸರಕುಗಳನ್ನು ಪ್ಯಾಕು ಮಾಡಿ ಮಾರುವಲ್ಲಿ ಅಥವಾ ಹಂಚುವಲ್ಲಿ ಪ್ಯಾಕು ಮಾಡುವವನನ್ನು ಒಳಗೊಳ್ಳುತ್ತದೆ.

Scanned with CamScanner

ಸರ್ಕಾರದ ಸರಕು ಉತ್ಪಾದಿಸುವ ಘಟಕವೂ ಸಹ ಈ ಪರಿಚ್ಛೇದದ ಪ್ರಕಾರ ವ್ಯಾಪಾರಿ ಎಂದು ಅರ್ಥ. ಆದರೆ ಮಾರಾಟಗಾರ ಮತ್ತು ಖರೀದಿಗಾರರನ್ನು ಒಂದು ಕಡೆಗೆ ಸೇರಿಸಿ, ವ್ಯವಹಾರ ಕುದುರಿಸುವ ಕಾರ್ಯ ಮಾಡಿ, ಕಮಿಷನ್ ಪಡೆಯಲು ಸೇವೆ ನೀಡುತ್ತಿರುವವನು ವ್ಯಾಪಾರಿ ಎಂದು ಹೇಳಲಾಗದು. **(Kuldeep Singh Kalra v/s Roshanlal Pal (1993) II CPJ 170 NC).**

12. ತಯಾರಕ (Manufacturer) **ಪರಿಚ್ಛೇದ** (1) (i)

i) ಯಾವುದೇ ಸರಕುಗಳನ್ನು ಅಥವಾ ಅವುಗಳ ಭಾಗಗಳನ್ನು ಮಾಡುವ ಅಥವಾ ತಯಾರಿಸುವ; ಅಥವಾ

ii) ಯಾವುದೇ ಸರಕುಗಳನ್ನು ಮಾಡದಿರುವ ಅಥವಾ ತಯಾರಿಸದಿರುವ, ಆದರೆ ಇತರರು ಮಾಡಿದ ಅಥವಾ ತಯಾರಿಸಿದ ಭಾಗಗಳನ್ನು ಜೋಡಿಸುವ ಮತ್ತು ಅಂಥ ಉತ್ಪಾದನೆಯನ್ನು ತಾನೇ ತಯಾರಿಸಿದ ಸರಕುಗಳೆಂದು ಕ್ಲೇಮು ಮಾಡುವ; ಅಥವಾ

iii) ಇತರ ಯಾವನೇ ತಯಾರಕನು ಮಾಡಿದ ಅಥವಾ ತಯಾರಿಸಿದ ಸರಕುಗಳಿಗೆ ತನ್ನ ಗುರುತನ್ನು ಹಾಕಿ ಅಥವಾ ಹಾಕುವಂತೆ ಮಾಡಿ ಅಂಥ ಸರಕುಗಳು ತಾನೇ ಮಾಡಿದವುಗಳು ಅಥವಾ ತಯಾರಿಸಿದವುಗಳು ಎಂದು ಕ್ಲೇಮು ಮಾಡುವ – ಯಾವನೇ ವ್ಯಕ್ತಿ ಎಂದು ಅರ್ಥ.

ಯಾವುದೇ ತಯಾರಕನು ಯಾವುದೇ ಸರಕುಗಳನ್ನು ಅಥವಾ ಅದರ ಭಾಗಗಳನ್ನು ತಾನು ಇಟ್ಟುಕೊಂಡು ಬಂದ ಶಾಖಾ ಕಚೇರಿಗೆ ಕಳಿಸಿದಲ್ಲಿ, ಹಾಗೆ ಕಳಿಸಲಾಗಿರುವ ಭಾಗಗಳನ್ನು ಅಂಥ ಶಾಖಾ ಕಚೇರಿಯಲ್ಲಿಯೇ ಜೋಡಿಸಿ ಮತ್ತು ಅಲ್ಲಿಂದಲೇ ಮಾರಾಟ ಮಾಡಿದಾಗ್ಯೂ ಅಥವಾ ಹಂಚಿದಾಗ್ಯೂ ಅಂಥ ಶಾಖಾ ಕಚೇರಿಯನ್ನು ತಯಾರಕ ಎಂದು ಭಾವಿಸತಕ್ಕುದಲ್ಲ.

13. ವ್ಯಕ್ತಿ (Person) **ಪರಿಚ್ಛೇದ 2** (1) (m)

i) ಫರ್ಮು ನೋಂದಾದ್ದು ಆಗಿರಲಿ ಅಥವಾ ಇಲ್ಲದಿರಲಿ;

ii) ಹಿಂದೂ ಅವಿಭಕ್ತ ಕುಟುಂಬ.

iii) ಸಹಕಾರಿ ಸಂಘ.

iv) ವ್ಯಕ್ತಿಗಳ ಇತರ ಯಾವುದೇ ಸಂಘ, ಅದು ಸಂಘಗಳ ನೊಂದಾವಣೆ ಅಧಿನಿಯಮ 1860 ರ (1860, 21 ನೇದ್ದು) ಮೇರೆಗೆ ನೊಂದಾಗಿರಲಿ ಅಥವಾ ಆಗದಿರಲಿ ಇವುಗಳನ್ನು ಒಳಗೊಳ್ಳುತ್ತದೆ.

5.6. [illegible]

Scanned with CamScanner